ಕರ್ನಾಟಕ ಸರ್ಕಾರ                                                  ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.527/2025

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಅಮರಮ್ಮ** | | |
| **ಗಂಡನ ಹೆಸರು** | **ಚಂದ್ರಶೇಖರ್** | **ಪಿಡಬ್ಲೂ:** | **1** |
| **ವಯಸ್ಸು** | **35 ವರ್ಷ** | **ಸಿಡಬ್ಲೂ:** | **1** |
| **ಉದ್ಯೋಗ:** | **ಗೃಹಿಣಿ** | | |
| **ವಾಸ ಸ್ಥಳ:** | **ಕಾರಟಗಿ.** | | |

**ದಿನಾಂಕ 08-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಅತ್ತೆ, ಚಾಸಾ-4 ನನ್ನ ಮಾವ, ಚಾಸಾ-5 ನನ್ನ ಚಿಕ್ಕಪ್ಪ, ಚಾಸಾ-2 & 3 ರವರ ಪರಿಚಯ ಇದೆ.

ದಿ.11-01-2023 ರಂದು ಸರ್ವೆ ನಂ. 81/2 & 81/3 ರಲ್ಲಿ ನಾನು & ಚಾಸಾ-4, 5 ರವರು ಕೆಲಸ ಮಾಡುತ್ತಿರುವಾಗ, 1 ನೇ ಆರೋಪಿ ಹೊಲದಲ್ಲಿ ಅತಿಕ್ರಮಣವಾಗಿ ಪ್ರವೇಶ ಮಾಡಿ, ಲೇ ಸೂಳೆ ಈ ಹೊಲ ಯಾರದ್ದು ಎಂದು ಬಂದಿದ್ದೀಯಾ, ಈ ಹೊಲ ನನಗೆ ಸೇರಿದ್ದು ಎಂದು ಜಗಳ ತೆಗೆದು, ನನ್ನ ಕೂದಲು ಹಿಡಿದು ಎಳೆದಾಡಿ, ಸೀರೆ ಹಿಡಿದು ಎಳೆದಾಡಿರುತ್ತಾನೆ, ಹೊಡೆದಿರುತ್ತಾನೆ. ಆಗ ಚಾಸಾ-4 & 5 ರವರು ಬಿಡಿಸಿಕೊಂಡಿರುತ್ತಾರೆ. ಆತ ಕೂಗಾಡುತ್ತಾ, ಇನ್ನೊಮ್ಮೆ ಈ ಹೊಲದಲ್ಲಿ ಕಾಲಿಟ್ಟರೆ ನಿನ್ನನ್ನು ತುಂಡುತುಂಡಾಗಿ ಕತ್ತರಿಸುತ್ತೇನೆ ಎಂದು ಜೀವದ ಬೆದರಿಕೆ ಹಾಕುತ್ತಾ ಹೋಗುತ್ತಾನೆ. ಇದಕ್ಕೆ ಪ್ರಚೋದನೆಯನ್ನು ನನ್ನ ಅತ್ತೆ ನೀಡಿರುತ್ತಾಳೆ. ಆತ ತನ್ನ ತಾಯಿಯ ಮಾತು ಕೇಳುತ್ತಾ ನನ್ನ ಜಮೀನಿನಲ್ಲಿ ಜಗಳಕ್ಕೆ ಬಂದಿರುತ್ತಾನೆ.

ದಿ.18-01-2023 ರಂದು ಬಳಗನೂರು ಪೋಲೀಸ್ ಠಾಣೆಗೆ ಸಂ.5-30 ಕ್ಕೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ನಮ್ಮ ಮದುವೆ ಬಳ್ಳಾರಿಯ ಬಸವ ಭವನದಲ್ಲಿ ದಿ.13-07-2011 ರಂದು ಆಗಿತ್ತು. ಮದುವೆಯ ನಂತರ ನಾನು ನನ್ನ ಗಂಡನ ಮನೆಯಾದ ತೋರಣಗಲ್‌ಗೆ ಹೋಗಿದ್ದೆ. 5 ವರ್ಷಗಳ ಕಾಲ ನನ್ನ ವೈವಾಹಿಕ ಜೀವನ ಸುಂದರವಾಗಿತ್ತು. ಆ ವೈವಾಹಿಕ ಜೀವನದಲ್ಲಿ ನನಗೆ ಇಬ್ಬರು ಗಂಡು ಮಕ್ಕಳು ಇರುತ್ತವೆ. ಆ ಮೇಲೆ ನನ್ನ ಗಂಡ ತನ್ನ ತಾಯಿಯ ಮಾತನ್ನು ಕೇಳಿಕೊಂಡು ನನಗೆ ಮಾನಸಿಕ ಹಿಂಸೆ & ಕಿರುಕುಳ ಕೊಡುತ್ತಿದ್ದನು. ನಾನು ಅಲ್ಲಿ ಬೇಸತ್ತು ಸಿಂಧನೂರಿಗೆ ಬಂದು ಮನೆ ಮಾಡಿಕೊಂಡು ನನ್ನ ಮಕ್ಕಳನ್ನು ಓದಿಸುತ್ತಾ ಇದ್ದೇನೆ. ಸಿಂಧನೂರಿನಲ್ಲಿ ನಾನು ವಾಸಿಸುತ್ತಿರುವ ಮನೆಗೆ ನನ್ನ ಗಂಡ ಅನಾವಶ್ಯಕವಾಗಿ ಬಂದು ನಮಗೆ ಕಿರುಕುಳ ಕೊಡುತ್ತಿದ್ದನು. ನನ್ನ ಗಂಡ ಕೊಡುತ್ತಿದ್ದ ಕಿರುಕುಳದಿಂದಾಗಿ ನಾನು ಮಾನಸಿಕ ಚಿಂತೆಯಿಂದಾಗಿ ನನ್ನ ತವರು ಮನೆಯಾದ ಕಾರಟಗಿಗೆ ಹೋಗಿ ವಾಸವಾಗಿದ್ದೇನೆ. ನಾನು 3 ವರ್ಷಗಳಿಂದ ಕಾರಟಗಿಯಲ್ಲಿದ್ದೇನೆ. ನನ್ನ ಗಂಡನ ಕಿರುಕುಳಕ್ಕೆ ಬೇಸತ್ತು ನಾನು ಕಾರಟಗಿ ಠಾಣೆಯಲ್ಲಿ ದೂರು ಸಲ್ಲಿಸಿದ್ದೇನೆ.

ಸಿಂಧನೂರಿನ ತಿಪ್ಪನಟ್ಟಿಯಲ್ಲಿರುವ ಜಮೀನು ಸರ್ವೆ ನಂ.81/2 & 81/3 ನನ್ನ ಸ್ವಂತ ಜಮೀನುಗಳು ಆಗಿರುತ್ತವೆ. ಸದರಿ ಜಮೀನುಗಳನ್ನು ನನ್ನ ತಾಯಿಯ ತವರು ಮನೆಯವರು ಕೊಡಿಸಿರುತ್ತಾರೆ.

ದಿ.19-01-2023 ರಂದು ನಮ್ಮ ಹೊಲದಲ್ಲಿ ಪಂಚನಾಮೆಗೆ ಬಂದಿರುತ್ತಾರೆ. ಆ ಕಾಲಕ್ಕೆ ಚಾಸಾ-2 & 3 ರವರು ಇದ್ದರು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕಾರಟಗಿಯಲ್ಲಿ ಮಾಡಿರುವ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ.**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**